**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ,**

**ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .**

**ಅಸಲು ದಾವಾ ನಂ. 303/2023**

**ಪಿಡಬ್ಲ್ಯೂ :1**

<u>ಸಾಕ್ಷಿಯನ್ನು ದಿನಾಂಕಃ 10-08-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>**ಮುಂದುವರೆದ ಪಾಟೀಸವಾಲು ಪ್ರತಿವಾದಿಗಳ ಪರ ಶ್ರೀ ವೈ ಎಂ ಆರ್ ವಕೀಲರಿಂದಃ**</u>

ನನ್ನ ವಾದ ಪತ್ರದ ಪರಿಹಾರದಲ್ಲಿ 1ನೇ ಪ್ರತಿವಾದಿಯ ಹೆಸರಿಗೆ ಇರುವ ಆಸ್ತಿ ಸಂಃ 59 ರ ಖಾತೆಯನ್ನು ತೆಗೆದುಹಾಕುವಂತೆ ಪ್ರತಿವಾದಿ 3 ರಿಂದ 5 ರವರಿಗೆ ಆದೇಶ ನೀಡಬೇಕು ಎಂದು ಕೋರಿರುತ್ತೇನೆ ಎಂದರೆ ಸರಿ . 1 ಮತ್ತು 2ನೇ ಪ್ರತಿವಾದಿಗಳು ಅಣ್ಣ ತಮ್ಮಂದಿರು ಎಂದರೆ ಸರಿ . ದಾವಾ ಆಸ್ತಿಯು ಪ್ರತಿವಾದಿ 1 ಮತ್ತು 2 ರವರು ಹುಟ್ಟುವದಕ್ಕೂ ಮೊದಲು ಖಾತೆಯು ಅವರ ತಂದೆಯಾದ ವಳಿಯಪ್ಪರ ಶಿವಲಿಂಗಪ್ಪನ ಹೆಸರಿಗೆ ಇತ್ತು ಎಂದರೆ ಸರಿಯಲ್ಲ. ಸದರಿ ಆಸ್ತಿಯ ಖಾತೆ ಸಂಖ್ಯೆ ಮೊದಲು ಖಾನೆ ಶುಮಾರಿ ನಂಃ 59 , ಖಾತೆ ನಂಃ 118 ಆಗಿತ್ತು ಎಂದರೆ ಸರಿಯಲ್ಲ. ಖಾನೆ ಶುಮಾರಿ ನಂಃ 59 ರ ಆಸ್ತಿಯು ಪ್ರತಿವಾದಿ 1 ಮತ್ತು 2 ರವರಿಗೆ ಅವರ ಅಜ್ಜನ ಕಾಲದಿಂದ ಬಂದ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮೂಲತಃ ಈ ದಾವೆ ದಾಖಲು ಮಾಡುವ 30 ವರ್ಷಗಳ ಹಿಂದೆ ವಳಿಯಪ್ಪರ ತೊಳಚಕ್ಕರ ರವರ ಹೆಸರಿಗೆ ಇತ್ತು ಎಂದರೆ ಸರಿಯಲ್ಲ. ವಳಿಯಪ್ಪರ ತೊಳಚಕ್ಕರ ರವರು ಈಗ ಇಲ್ಲ ಎಂದರೆ ಸರಿ . ಪ್ರತಿವಾದಿ 1 ಮತ್ತು 2 ರವರು ವಳಿಯಪ್ಪರ ತೊಳಚಕ್ಕರ ರವರ ವಂಶಸ್ಥರು ಎಂಬ ವಿಚಾರ ನನಗೆ ಗೊತ್ತಿಲ್ಲ. ನಾನು ಖಾನೆ ಶುಮಾರಿ ಸಂಃ 59 ರ ಸ್ವತ್ತು ವಳಿಯಪ್ಪರ ತೊಳಚಕ್ಕರ ರವರ ಹೆಸರಿನಲ್ಲಿದ್ದ ಬಗ್ಗೆ ನಾನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ವಳಿಯಪ್ಪರ ತೊಳಚಕ್ಕರ ರವರ ಮರಣಾ ನಂತರದಲ್ಲಿ ಪೌತಿ ಆಧಾರದ ಮೇರೆಗೆ ನುಗ್ಗೇಹಳ್ಳಿ ಪಂಚಾಯಿತಿಯವರು ತಮ್ಮ ಕಾನೂನು ಸಲಹೆಗಾರರಿಂದ ಸಲಹೆ ಪಡೆದು 1ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಖಾತೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಖಾನೆ ಶುಮಾರಿ ಸಂಃ 59 ರ ಖಾತೆಯು 1ನೇ ಪ್ರತಿವಾದಿಯ ಹೆಸರಿಗೆ ದಾಖಲು ಮಾಡುವ ಸಮಯದಲ್ಲಿ ನಾನು ತಕರಾರು ಮಾಡಿರುತ್ತೇನೆ ಎಂದರೆ ಇ ಸ್ವತ್ತು ಮಾಡುವ

ಸಮಯದಲ್ಲಿ ಮಾಡಿರುತ್ತೇನೆ. ನಾನು ತಕರಾರು ಮಾಡಿದ್ದರಿಂದ ನುಗ್ಗೇಹಳ್ಳಿ ಗ್ರಾಮ ಪಂಚಾಯಿತಿಯವರು 1ನೇ ಪ್ರತಿವಾದಿ ಹೆಸರಿಗೆ ಖಾತೆ ದಾಖಲು ಮಾಡುವ ಪೂರ್ವದಲ್ಲಿ ತಮ್ಮ ಇಲಾಖೆಯ ಕಾನೂನು ಸಲಹೆಗಾರರಿಂದ 2ನೇ ಬಾರಿ ಕಾನೂನು ಅಭಿಪ್ರಾಯವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ . ನಾನು ತಕರಾರು ಮಾಡಿದ ನಂತರ 4 ಮತ್ತು 5 ಪ್ರತಿವಾದಿಗಳು ಕಾನೂನು ಅಭಿಪ್ರಾಯ ಪಡೆದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ವಿಚಾರಣೆ ಮಾಡಿ 1ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖಾನೆ ಶುಮಾರಿ ಸಂಃ 59 ರ ಆಸ್ತಿಯ ಖಾತೆ 1ನೇ ಪ್ರತಿವಾದಿ ಹೆಸರಿಗೆ ದಾಖಲಾದ ನಂತರ ನಾನು ಖಾನೆ ಶುಮಾರಿ ಸಂಃ 59 ರ ಆಸ್ತಿಯ ಚೆಕ್ಕುಬಂಧಿಯನ್ನು ದಾವಾ ಆಸ್ತಿಯ ನಂಬರಿಗೆ ಚೆಕ್ಕುಬಂಧಿಯನ್ನಾಗಿ ತೋರಿಸಿ ಈ ದಾವೆಯನ್ನು ದಾಖಲು ಮಾಡಿರುತ್ತೇನೆ ಹೊರತು ಯಾವುದೇ ಮೇಲ್ಮನವಿಯನ್ನು ಸಿಇಒ ಮತ್ತು ಇಒ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ . ಖಾನೆ ಶುಮಾರಿ ನಂಃ 59 ರ ಸ್ವತ್ತು ತೊಳಚಕ್ಕನವರಿಂದ ಹಿಡಿದು ಇಲ್ಲಿಯವರೆಗೂ ಅವರ ಮನೆತನದವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಖಾನೆ ಶುಮಾರಿ ಸಂಃ 59 ರಲ್ಲಿ ಇದ್ದ ಮನೆಯು ತುಂಬಾ ಹಳೆಯದ್ದಾಗಿದ್ದರಿಂದ ಈಗ ಬಿದ್ದು ಹೋಗಿರುತ್ತದೆ ಎಂದರೆ ಸರಿ . ಖಾನೆ ಶುಮಾರಿ ಸಂಃ 59 ರಲ್ಲಿ ಬಿದ್ದು ಹೋಗಿದ್ದ ಮನೆಯನ್ನು ದುರಸ್ಥಿ ಮಾಡಿಸಲು ಪ್ರತಿವಾದಿ 1 ಮತ್ತು 2 ರವರು ಇಸ್ವತ್ತು ಮಾಡಿಸಲು ಅರ್ಜಿ ಸಲ್ಲಿಸಿದಾಗ ನಾನು ತಕರಾರು ಮಾಡಿರುತ್ತೇನೆ ಎಂದರೆ ಸರಿ .

ಖಾನೆ ಶುಮಾರಿ ಸಂಃ 59 ರ ಆಸ್ತಿಗೆ ಇಸ್ವತ್ತು ಮಾಡಲು ನಾನು ತಕರಾರು ಮಾಡಿದ್ದರಿಂದ ನುಗ್ಗೇಹಳ್ಳಿ ಗ್ರಾಮ ಪಂಚಾಯಿತಿಯವರು ಇಲ್ಲಿಯವರೆಗೂ ಪ್ರತಿವಾದಿ 1 ಮತ್ತು 2 ರವರ ಹೆಸರಿಗೆ ಇ ಸ್ವತ್ತು ಮಾಡಿರುವುದಿಲ್ಲ ಎಂದರೆ ಸರಿ . 1954 ನೇ ಸಾಲಿನಿಂದ ಇಲ್ಲಿಯವರೆಗೂ ಖಾನೆ ಶುಮಾರಿ ಸಂಃ 59 ರ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿ 1 ಮತ್ತು 2 ರವರ ಮನೆತನದವರು ಕಂದಾಯವನ್ನು ಪಾವತಿ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಗೊತ್ತಿಲ್ಲ.

ವಳಿಯಪ್ಪಳ ಪಂಪಾಪತಿ ಎನ್ನುವವರು ನಮ್ಮ ಮನೆತನದವರಲ್ಲ. ಮೂಲತಃ ಸದರಿ ಖಾನೆ ಶುಮಾರಿ ಸಂಃ 59 ರ ಆಸ್ತಿಯು ತೊಳಚಕ್ಕರವರ ಹೆಸರಿಗೆ ಬರುವುದಕ್ಕೂ ಪೂರ್ವದಲ್ಲಿ ವಳಿಯಪ್ಪಳ ಪಂಪಾಪತಿ ರವರ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿಯವರ ಮರಣಾ ನಂತರ ಸದರಿ ಆಸ್ತಿಯ ಖಾತೆಯು ಶಿವಲಿಂಗಪ್ಪ ರವರ ಹೆಸರಿಗೆ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಖಾನೆ ಶುಮಾರಿ ಸಂಃ 59 ರ ಆಸ್ತಿಯು ವಳಿಯಪ್ಪಳ ಪಂಪಾಪತಿಯಪ್ಪ ,

ವಳಿಯಪ್ಪಳ ತೊಳಚಕ್ಕ ಮತ್ತು ಶಿವಲಿಂಗಪ್ಪನವರ ಹೆಸರಿಗೆ ಖಾತೆ ಇದ್ದ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಪ್ರಸ್ತುತ ಖಾನೆ ಶುಮಾರಿ ಸಂಃ 59 ರ ಆಸ್ತಿಯು ಶಿವಲಿಂಗಪ್ಪನವರ ಹೆಸರಿನಿಂದ 1ನೇ ಪ್ರತಿವಾದಿ ಹೆಸರಿಗೆ ಖಾತೆ ದಾಖಲಾಗಿರುವ ದಾಖಲೆಗಳನ್ನು 1991-92 ನೇ ಇಸವಿಯಲ್ಲಿ ನೋಡಿರುತ್ತೇನೆ. 1991-92 ನೇ ಸಾಲಿನಿಂದ ಖಾನೆ ಶುಮಾರಿ ಸಂಃ 59 ರ ಆಸ್ತಿಯು 1ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿರುತ್ತದೆ ಎಂದರೆ ಸರಿ . ಖಾನೆ ಶುಮಾರಿ ಸಂಃ 59 ರ ಆಸ್ತಿಗೆ ಸಂಬಂಧಪಟ್ಟಂತೆ ವಳಿಯಪ್ಪಳ ಪಂಪಾಪತಿಯಪ್ಪ , ವಳಿಯಪ್ಪಳ ತೊಳಚಕ್ಕ ಮತ್ತು ಶಿವಲಿಂಗಪ್ಪ ಹಾಗೂ 1ನೇ ಪ್ರತಿವಾದಿಯು ಮತ್ತು ಅವರ ಕುಟುಂಬಸ್ಥರು ಯಾವುದೇ ಕಾಗದ ಪತ್ರವನ್ನು ನಮ್ಮ ಕುಟುಂಬಕ್ಕೆ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿ . ಖಾನೆ ಶುಮಾರಿ ಸಂಃ 59 ರ ಆಸ್ತಿಯನ್ನು ಪ್ರತಿವಾದಿ 1ಮತ್ತು 2 ರವರ ಕುಟುಂಬಸ್ಥರು ಯಾವತ್ತಿಗೂ ನಮ್ಮ ಸ್ವಾಧೀನಾನುಭವಕ್ಕೆ ಬಿಟ್ಟು ಕೊಟ್ಟಿಲ್ಲ ಎಂದರೆ ಸರಿ . ನನ್ನ ಅಜ್ಜಿ ವೀರಮ್ಮ ಮತ್ತು ಪ್ರತಿವಾದಿಗಳ ಕುಟುಂಬದ ಮೂಲ ಪುರಷರಾದ ವಳಿಯಪ್ಪಳ ಪಂಪಾಪತಿಯಪ್ಪ , ತೊಳಚಕ್ಕ ಮತ್ತು ಶಿವಲಿಂಗಪ್ಪನವರ ಕುಟುಂಬವೂ ಬೇರೆ ಬೇರೆ ಎಂದರೆ ಸರಿ . ಖಾನೆ ಶುಮಾರಿ ಸಂಃ 57 ರ ಆಸ್ತಿಗೆ ಅಸಲು ದಾವಾ ಸಂಃ 380/1920 ರ ನ್ಯಾಯಾಲಯದ ಆದೇಶದಂತೆ ಖಾತೆಯು ದಾಖಲಾಗಿಲ್ಲ ಮತ್ತು ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನಾನು 1 ಮತ್ತು 2 ನೇ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಚೆಕ್ಕುಬಂಧಿ , ವಿಸ್ತೀರ್ಣ ಮತ್ತು ಆಸ್ತಿ ಸಂಖ್ಯೆಯನ್ನು ನಮೂದಿಸಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖಾನೆ ಶುಮಾರಿ ಸಂಃ 179 ಮತ್ತು 180 ರ ಆಸ್ತಿಗೆ ಸಂಬಂಧಿಸಿದಂತೆ ಸುಮಾರು 20 ವರ್ಷಗಳಿಂದ ನಮ್ಮ ಮತ್ತು ಪರಮೇಶ್ವರಪ್ಪ ಹಾಗೂ ಚಂದ್ರಪ್ಪನವರ ಕುಟುಂಬದವರ ನಡುವೆ ದಾವೆ ಇದೆ ಎಂದರೆ ಸರಿ . ನಮ್ಮ ಆಸ್ತಿಯ ಅಕ್ಕ ಪಕ್ಕದಲ್ಲಿ ಇರುವ ಬೇರೆಯವರ ಆಸ್ತಿಗಳನ್ನು ಪಡೆಯುವ ಉದ್ದೇಶದಿಂದ ಪಂಚಾಯಿತಿಯವರ ಜೊತೆ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಪ್ರಕರಣ ದಾಖಲು ಮಾಡುವ ಹವ್ಯಾಸ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನಮ್ಮ ಹೆಸರಿಗೆ ಮತ್ತು ನಮ್ಮ ಮನೆತನದವರ ಹೆಸರಿಗೆ ಯಾವ ರೀತಿ ಖಾತೆ ಬಂದಿರುತ್ತದೆ ಎಂದು ತೋರಿಸಲು ಯಾವುದೇ ನೊಂದಾಯಿತ ದಾಖಲೆಗಳನ್ನು ಇಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ನ್ಯಾಯಾಲಯದ ಆದೇಶದಂತೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಅಸಲು ದಾವಾ ಸಂಃ 380/1920 ರ ಪ್ರಕರಣದಲ್ಲಿ ಈ ಪ್ರಕರಣದ ದಾವಾ ಆಸ್ತಿಯ ಅಳತೆ, ನಂಬರ್ ಮತ್ತು ಚೆಕ್ಕುಬಂಧಿ ಇಲ್ಲ ಎಂದರೆ

ಸರಿಯಲ್ಲ. ನನ್ನ ಅನುಕೂಲಕ್ಕೆ ತಕ್ಕಂತೆ ಪ್ರತಿವಾದಿ 1 ಮತ್ತು 2 ರ ಆಸ್ತಿ ಕಬಳಿಸಲು ಪಂಚಾಯಿತಿಯಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಖಾನೆ ಶುಮಾರಿ ನಂಃ 56, 57 ರ ಉತ್ತರ ದಿಕ್ಕಿಗೆ ಖಾನೆ ಶುಮಾರಿ ಸಂಃ 59 ರ ಆಸ್ತಿ ಬರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದು ನುಡಿಯುತ್ತಾರೆ . ಖಾನೆ ಶುಮಾರಿ ಸಂಃ 59 ರ ಆಸ್ತಿಯು ಪೂರ್ವ ಪಶ್ಚಿಮಕ್ಕೆ 12 ½ ಮೀಟರ್ , ಉತ್ತರ ದಕ್ಷಿಣಕ್ಕೆ 15 ಮೀಟರ್ ಬರುತ್ತದೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ಪೂರ್ವ ಪಶ್ಚಿಮಕ್ಕೆ 16 ರಿಂದ 17 ಮೀಟರ್ , ಉತ್ತರ ದಕ್ಷಿಣಕ್ಕೆ 3 ½ ರಿಂದ 4 ಮೀಟರ್ ಅಳತೆ ಇರುತ್ತದೆ. ಸದರಿ ವಿಸ್ತೀರ್ಣದಲ್ಲಿದ್ದ ಮನೆಯ ಮೇಲ್ಚಾವಣಿ ಬಿದ್ದು ಹೋಗಿತ್ತು ಎಂದರೆ ಸರಿ . ನಾನು ದಾವಾ ಆಸ್ತಿಯಲ್ಲಿ ತೋರಿಸಿರುವ ಚೆಕ್ಕುಬಂಧಿ ಮತ್ತು ಅಳತೆ ಪ್ರತಿವಾದಿ 1 ಮತ್ತು 2 ರವರ ಖಾನೆ ಶುಮಾರಿ ಸಂಃ 59 ರ ಆಸ್ತಿ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಆಸ್ತಿಯಲ್ಲಿ ನಾವು ಯಾವತ್ತಿಗೂ ಸ್ವಾಧೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಮಾಲೀಕ ಮತ್ತು ಅನುಭವದಾರರು ಅಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರಿಲ್ಲಿರುವ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಮಾಡಿಕೊಳ್ಳುವ ಯಾವುದೇ ಹಕ್ಕು ಮತ್ತು ಅನುಭವ ಹೊಂದಿಲ್ಲ ಎಂದರೆ ಸರಿಯಲ್ಲ. ಖಾನೆ ಶುಮಾರಿ ಸಂಃ 59 ಕ್ಕೆ 1970 ರಿಂದ ಇಲ್ಲಿಯವರೆಗೂ ಯಾವುದೇ ಭಾಗಕ್ಕೆ ನನ್ನ ಹಾಗೂ ನನ್ನ ಕುಟುಂಬಸ್ಥರ ಹೆಸರಿಗೆ ಯಾವುದೇ ಪಂಚಾಯಿತಿಯಲ್ಲಿ ಖಾತೆ ದಾಖಲಾಗಿಲ್ಲ ಎಂದರೆ ಸರಿ .

**3 ರಿಂದ 5ನೇ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

sd/-

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.